**Publication:** Sanjevani
**Date:** 07/08/2016
**Edition:** Bengaluru
**Page No:** 3
**Headline:** IT Wiz winners

# ಐಟಿ ಕ್ವಿಜ್‌ನ ವಿಜೇತರಿಗೆ ಗೌರವ




ಅಂತರ ಶಾಲಾ ಕ್ವಿಜ್ ಟಿಸಿಎಸ್ ಐಟಿ ವಿಜ್ಹ್‌ನಲ್ಲಿ ಜಯಗಳಿಸಿದ ಪ್ರೇಸಿಡೆನ್ಸಿ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಪೋಲೀಸ್ ಆಯುಕ್ತ(ಸಂಚಾರ) ಆರ್.ಹಿತೇಂದ್ರ ಅವರು ಬಹುಮಾನಗಳನ್ನು ವಿತರಿಸಿದರು ಖ್ಯಾತ ಕ್ವಿಜ್ ಮಾಸ್ಟರ್ ಬಾಲಸುಬ್ರಮಣ್ಯನ್ ಅವರಿದ್ದಾರೆ.

ಬೆಂಗಳೂರು,ಆ.7–ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನದ ಟ್ರೆಂಡ್ ಹೇಗಿದೆ ಎಂಬುದರ ಬಗ್ಗೆ ನಡೆದ ದೇಶದ ದೊಡ್ಡ ಅಂತರ ಶಾಲಾ ಕ್ವಿಜ್ ಟಿಸಿಎಸ್ ಐಟಿ ವಿಜ್ಹ್‌ನಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ನಗರದ ಹೆಚ್ಚುವರಿ ಪೋಲೀಸ್ ಆಯುಕ್ತ(ಸಂಚಾರ)ಆರ್.ಹಿತೇಂದ್ರ ಅವರು ಬಹುಮಾನಗಳನ್ನು ವಿತರಿಸಿದರು.

ನಗರದ ವೈಯಾಲಿಕಾವಲ್‌ನ ಚೌಡಯ್ಯಮೆಮೋರಿಯಲ್‌ಹಾಲ್‌ನಲ್ಲಿ ಆಯೋಜಿಸಿದ್ದ ಟಿಸಿಎಸ್ ಐಟಿ ವಿಜ್ಹ್‌ನಲ್ಲಿ ನಗರದ ವಿವಿಧ ಶಾಲೆಗಳ 1 ಸಾವಿರಕ್ಕೂ ಹೆಚ್ಚು 8 ರಿಂದ 12 ನೇ ತರಗತಿವರೆಗಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನ ಹಲವು ಶಾಲೆಗಳ ಸುಮಾರು 1000 ವಿದ್ಯಾರ್ಥಿಗಳು ಉತ್ಸಾಹ ಮತ್ತು ವಿಶ್ವಾಸದಿಂದ ಪಾಲ್ಗೊಂಡಿದ್ದರು.ಕ್ವಿಜ್‌ನಲ್ಲಿ ಸ್ಪರ್ಧಿಸಿದ್ದ ವಿದ್ಯಾರ್ಥಿಗಳ ತಂಡಗಳ ಪೈಕಿ ಮೊದಲ ಆರು ತಂಡಗಳು ಪ್ರಾದೇಶಿಕ ಫೈನಲ್‌ನಲ್ಲಿ ಸ್ಪರ್ಧಿಸುವ ಅರ್ಹತೆ ಪಡೆದಿದ್ದು 5 ಸುತ್ತುಗಳ ನಂತರ ಪ್ರಾದೇಶಿಕ ಫೈನಲ್ಸ್‌ನಲ್ಲಿ ಪ್ರೇಸಿಡೆನ್ಸಿ ಶಾಲೆಯ ವಿದ್ಯಾರ್ಥಿಗಳಾದ ಸುಮಂತ್ ಡಿ.ರಾಜು ಹಾಗೂ ಸುಕೇತ್ ಅವರು ಪ್ರಶಸ್ತಿ ಗೆದ್ದರು.

ಈ ಪ್ರಾದೇಶಿಕ ಫೈನಲ್‌ನಲ್ಲಿ ಗೆದ್ದ ತಂಡದ ವಿದ್ಯಾರ್ಥಿಗಳು ಐಪಾಡ್ ಏರ್ ಅನ್ನು ಬಹುಮಾನವಾಗಿ ಪಡೆದರು.

ದ್ವಿತೀಯ ಸ್ಥಾನ ಪಡೆದ ಕುಮಾರನ್ಸ್ ಶಾಲೆಯ ವಲ್ಲಭ ರಮಾಕಾಂತ್ ಹಾಗೂ ಮೋಹಿತ್ ಜೋಷಿ ಅವರು ಐಪಾಡ್ ಮಿನಿಯನ್ನು ಬಹುಮಾನ ರೂಪದಲ್ಲಿ ಪಡೆದರು. ಇದರೊಂದಿಗೆ ವರ್ಣರಂಜಿತವಾದ ಟ್ರೋಫಿ ಮತ್ತು ಪದಕಗಳನ್ನೂ ಬಹುಮಾನ ವಿಜೇತರಿಗೆ ವಿತರಿಸಲಾಯಿತು. ಅಲ್ಲದೇ, ಫೈನಲ್‌ಗೆ ಅರ್ಹತೆ ಪಡೆದಿದ್ದ ಎಲ್ಲಾ 6 ತಂಡಗಳ ಸದಸ್ಯರಿಗೆ ಟಿಸಿಎಸ್ ವತಿಯಿಂದ ಸ್ಪೇಸ್ ಪ್ಯಾಕ್, ಸೆಲ್ಫಿ ಸ್ಟಿಕ್, ಇಯರ್‌ಫೋನ್, ಬ್ಲೂಟೂತ್ ಸ್ಪೀಕರ್‌ಗಳು ಮತ್ತು ಪೆನ್‌ಡ್ರೈವ್‌ಗಳನ್ನು ಬಹಮಾನವಾಗಿ ನೀಡಲಾಯಿತು. ಈ ಕ್ವಿಜ್‌ನ್ನು ಖ್ಯಾತ ಕ್ವಿಜ್ ಮಾಸ್ಟರ್ ಬಾಲಸುಬ್ರಮಣ್ಯನ್ ಅವರು ನಡೆಸಿಕೊಟ್ಟರು

ಟಿಸಿಎಸ್ ವಿಜ್ಹ್ 2016 ಅಹ್ಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ಕೊಯಮತ್ತೂರು, ದೆಹಲಿ, ಹೈದ್ರಾಬಾದ್, ಇಂದೋರ್, ಕೊಚ್ಚಿ, ಕೋಲ್ಕತ್ತಾ, ಲಕ್ನೋ, ಮುಂಬೈ, ನಾಗ್ಪುರ, ಪುಣೆ ವಿಶಾಖಪಟ್ಟಣ ಸೇರಿ ದೇಶದ 15 ನಗರಗಳಲ್ಲಿ ನಡೆಯಲಿದೆ.